ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ನರೇಂದರ್

ಶ್ರೀ ಟಿ. ನಾಗರಾಜು ವಿರುದ್ಧ ಕರ್ನಾಟಕ ರಾಜ್ಯ, ಉಪ ವಿಭಾಗಾಧಿಕಾರಿಗಳು, ತುಮಕೂರು ಮತ್ತು ಇತರರು

ರಿಟ್ ಅರ್ಜಿಸಂಖ್ಯೆ:4355/2009, (ಎಲ್.ಬಿ.-ಇ.ಎಲ್.ಇ.) ಇದರೊಂದಿಗೆ ಇತರೆ, ದಿನಾಂಕ 11ನೇ ಸೆಪ್ಟೆಂಬರ್, 2019

ಆಜ್ಞೆ

ನ್ಯಾಯಮೂರ್ತಿ ಶ್ರೀ ಜಿ. ನರೇಂದರ್:

ರಿಟ್ ಅರ್ಜಿಸಂಖ್ಯೆ: 4355/2019 ರಲ್ಲಿನ ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಪಿ.ಪಿ. ಹೆಗಡೆ, ರಿಟ್ ಅರ್ಜಿಸಂಖ್ಯೆ: 14214/2018 ರಲ್ಲಿ ಹಾಗೂ ರಿಟ್ ಅರ್ಜಿಸಂಖ್ಯೆ: 52359/2018 ಅರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಹರಿಪ್ರಸಾದ್ ಎಂ. ಬಿ. ಅವರು, ರಿಟ್ ಅರ್ಜಿ ಸಂಖ್ಯೆ 4355/2019 ರಲ್ಲಿನ 4 ರಿಂದ 10 ರವರೆಗಿನ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಂ.ಆರ್. ರಾಜಗೋಪಾಲ್, ರಿಟ್ ಅರ್ಜಿಸಂಖ್ಯೆ: 14214/2018 ರಲ್ಲಿನ 4 ರಿಂದ 19 ರವರೆಗಿನ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ಎಸ್. ಸಿ. ವಿಜಯಕುಮಾರ್, ರಿಟ್ ಅರ್ಜಿಸಂಖ್ಯೆ: 14214/2018 ರಲ್ಲಿನ 3 ನೇ ಪ್ರತ್ಯರ್ಜಿದಾರ ಹಾಗೂ ರಿಟ್ ಅರ್ಜಿಸಂಖ್ಯೆ: 52359/2018 ರಲ್ಲಿನ 5 ನೇ ಪ್ರತ್ಯರ್ಜಿದಾರ ಹಾಗೂ ರಿಟ್ ಅರ್ಜಿಸಂಖ್ಯೆ: 52359/2018 ರಲ್ಲಿನ 9 ಹಾಗೂ 6 ರಿಂದ 23 ರ ವರೆಗಿನ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿಜಯಕುಮಾರ್ ಇವರ ವಾದವನ್ನು ಆಲಿಸಿರುತ್ತೇವೆ.

2. ಮುಖ್ಯ ರಿಟ್ ಅರ್ಜಿಯಲ್ಲಿನ ಅರ್ಜಿದಾರನು 2015 ರ ಮೇ ತಿಂಗಳಲ್ಲಿ ಮಾರ್ಕೋನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯನಾಗಿ ಆಯ್ಕೆಯಾಗಿರುತ್ತಾನೆಂಬುದು ಇವರ ವಾದವಾಗಿರುತ್ತದೆ.ತರುವಾಯ, ಅರ್ಜಿದಾರನು ಅಧ್ಯಕ್ಷ ಸ್ಥಾನಕ್ಕೆ ಯಶಸ್ವಿಯಾಗಿ ಸ್ಪರ್ಧಿಸಿರುತ್ತಾನೆ.ಅರ್ಜಿದಾರನು ಯಾವುದೇ ಆಪಾದನೆಗಳಿಲ್ಲದೆ, ಸದರಿ ಹುದ್ದೆಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾನೆ.ಹಾಗೆ ಮಾಡುವಾಗ, ಈತನಿಗೆ, ಪ್ರತ್ಯರ್ಜಿದಾರಸಂಖ್ಯೆ: 1 ಸಹಾಯಕ ಆಯುಕ್ತರು, ಮಾರ್ಕೋನಹಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರು ಪ್ರಸ್ತಾಪಿಸಿದ ಅವಿಶ್ವಾಸ ಮಂಡನೆಯನ್ನು ಪರಿಗಣಿಸಲುದಿನಾಂಕ: 30.01.2019 ರಂದು ಬೆಳಿಗ್ಗೆ 11.00 ಗಂಟೆಗೆ ಸಭೆಯನ್ನು ಆಯೋಜಿಸಲಾಗಿದೆಯೆಂದು ಸೂಚಿಸಿ,ದಿನಾಂಕ: 14.01.2019 ರಂದು ನೋಟೀಸನ್ನು ಹೊರಡಿಸಿರುತ್ತಾರೆ.ಇದರ ಒಂದು ಪ್ರತಿಯನ್ನು ಅನುಬಂಧ- ಎ ಎಂದು ಹಾಜರುಪಡಿಸಿದ್ದು, ರಿಟ್ ಅರ್ಜಿಯಲ್ಲಿ ಇದನ್ನು ಪ್ರಶ್ನಿಸಲಾಗಿರುತ್ತದೆ.

3. ನೋಂದಾಯಿತ ಅಂಚೆಯ ಮೂಲಕದಿನಾಂಕ: 16.01.2019 ರಂದು ಇವನಿಗೆ ನೋಟೀಸನ್ನು ನೀಡಿರುತ್ತಾನೆಂಬುದು ಇವನ ವಾದವಾಗಿರುತ್ತದೆ.ಅಂಚೆ ಪತ್ರವನ್ನು ತೆರೆದು ನೋಡಿದ ಮೇಲೆ, ಪ್ರಸ್ತಾವಿತ ಪ್ರಸ್ತಾವದ ಪ್ರತಿಯು ಕಂಡು ಬಂದಿರುತ್ತದೆ.ಈತನನ್ನು ಹೊರದೂಡಲು ಸದಸ್ಯರು ಹೊರಿಸಿರುವ ಆರೋಪಗಳ ಆಧಾರಗಳಿಗೆ ಸಂಬಂಧಿಸಿದಂತೆ ಅರ್ಜಿದಾರನನ್ನು ಅಂಧಕಾರದಲ್ಲಿಟ್ಟಿರುತ್ತಾರೆ.ಪ್ರತ್ಯರ್ಜಿದಾರಸಂಖ್ಯೆ: 1, ಈ ವರೆವಿಗೂ ಯಾವುದೇ ಕಾರಣಗಳನ್ನು ತಿಳಿಸದೆ ಸಭೆ ಕರೆದು ದೋಷವೆಸಗಿರುತ್ತಾರೆಂಬುದೂ ಈತನ ವಾದವಾಗಿರುತ್ತದೆ.

4. ಮುಖ್ಯ ರಿಟ್ ಅರ್ಜಿಯಲ್ಲಿನ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು 15 ದಿನಗಳ ಸ್ಪಷ್ಟ ನೋಟೀಸು ನೀಡದಿರುವುದರಿಂದ, ಸಭೆಗೆ ಕರೆದಿರುವ ನೋಟೀಸು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡನೆ) ನಿಯಮಗಳು, 1994 (ಸಂಕ್ಷಿಪ್ತವಾಗಿ 1994 ರ ನಿಯಮಗಳು ' ಎಂದು ಕರೆಯಲಾಗಿರುತ್ತದೆ) ರ 3 ನೇ ನಿಯಮದ ಉಪಬಂಧಗಳ ಉಲ್ಲಂಘನೆಯಾಗಿರುತ್ತದೆಂದು ಹಾಗೂ 15 ದಿನಗಳ ಸ್ಪಷ್ಟ ನೋಟೀಸಿಲ್ಲದ ಸದರಿ ನೋಟೀಸನ್ನು ಅನುಸರಿಸಿ ನಡೆಸಿದ ಸಭೆಯ 1994 ರ ನಿಯಮಗಳ 3 ನೇ ನಿಯಮದ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆಂದು ವಾದಿಸಿರುತ್ತಾರೆ.ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಯು ಹಲವಾರು ಆಧಾರಗಳ ಮೇಲೆ 1994 ರ ನಿಯಮಗಳ ಉಲ್ಲಂಘನೆಯನ್ನು ಪ್ರಶ್ನಿಸಿದ್ದಾಗ್ಯೂ, ಈತ ಸದರಿ ನಿವೇದನೆಗೆ ಆದ್ಯತೆ ನೀಡಿಲ್ಲವೆಂದು ನಿವೇದಿಸಿಕೊಂಡಿರುತ್ತಾನೆ ಹಾಗೂ 15 ದಿನಗಳ

ಸ್ಪಷ್ಟ ನೋಟೀಸನ್ನು ನೀಡದೆ ವಿಫಲವಾದ ಕಾರಣದ ಮೇಲೆ ನಿರರ್ಥಕವಾಗಿರುವ ಸಭೆಯ ನೋಟೀಸಿನ ಒಂದೇ ಆಧಾರದ ಮೇಲೆ ರಿಟ್ ಅರ್ಜಿಯನ್ನು ಪುರಸ್ಕರಿಸಬೇಕೆಂದು ನಿವೇದಿಸಿಕೊಂಡಿರುತ್ತಾನೆ.ಸದರಿ ನಿವೇದನೆಯ ಹಿನ್ನೆಲೆಯಲ್ಲಿ (ಎಎ) ಹಾಗೂ (ಬಿ) ಕೋರಿಕೆಯನ್ನು ಪರಿಗಣನೆಗಾಗಿ ಪುರಸ್ಕರಿಸಲಾಗುವುದಿಲ್ಲ.ತದನುಸಾರವಾಗಿ ತಿರಸ್ಕರಿಸಲಾಗಿರುತ್ತದೆ.

5. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಶ್ರೀ ರಾಮನಾಥ್ ಐಯ್ಯರ್ ರವರ ಬೃಹತ್ ಕಾನೂನು ನಿಘಂಟಿನ IV ನೇ ಸಂಪುಟ 2010 ನ್ನು ಪ್ರಸ್ತಾಪಿಸಿ, ಅದರಲ್ಲಿನ ' ಸ್ಪಷ್ಟ ದಿನಗಳು ' ಪದಾವಳಿಯ ಪರಿಭಾಷೆಯ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದು, ಶಾಸನವು, ' ಸ್ಪಷ್ಟ ದಿನಗಳು ' ಪದಾವಳಿಯನ್ನು ಬಳಸಿದಲ್ಲಿ, ತರುವಾಯ, ಸ್ವೀಕರಿಸಿದ ದಿನಾಂಕ ಹಾಗೂ ಅಂತಿಮ ದಿನವನ್ನು ಸ್ಪಷ್ಟ ದಿನವನ್ನು ಲೆಕ್ಕ ಹಾಕುವ ಉದ್ದೇಶಕ್ಕೆ ಸಂಬಂಧಿಸಿದಂತೆ ಲೆಕ್ಕಹಾಕಬೇಕಾಗಿದ್ದು, ಅದರಲ್ಲಿ, ಸ್ವೀಕೃತ ದಿನಾಂಕ ಹಾಗೂ ಪ್ರಸ್ತಾಪಿತ ಕ್ರಮದ ನಡುವಿನ ಮಧ್ಯದ ಅವಧಿಯು 15 ಸ್ಪಷ್ಟ ದಿನಗಳಾಗಿರಬೇಕೆಂದು ವಾದಿಸಿರುತ್ತಾನೆ.ಪ್ರಸ್ತುತ ಪ್ರಕರಣದಲ್ಲಿ,ದಿನಾಂಕ: 16.01.2019 ರಂದು ಸಭೆಯ ಸೂಚನಾ ಪತ್ರವನ್ನು ಸ್ವೀಕರಿಸಲಾಗಿರುತ್ತದೆ ಹಾಗೂ ಸಭೆಯನ್ನುದಿನಾಂಕ: 30.01.2019 ರಂದು ನಡೆಸಬೇಕಾಗಿದೆಯೆಂದು ಸೂಚಿಸಲಾಗಿರುತ್ತದೆ ಹಾಗೂ ಎರಡು ಅಂತಿಮ ದಿನಗಳನ್ನು ಅಂದರೆ, ಸ್ವೀಕೃತಿಯ ದಿನಾಂಕ ಹಾಗೂ ಸಭೆಯ ದಿನಾಂಕಗಳನ್ನು ಹೊರತುಪಡಿಸಿದಲ್ಲಿ ಕೇವಲ 13 ದಿನಗಳು ಉಳಿಯುತ್ತವೆ.ಹಾಗಾಗಿ, ಸಭೆಯ ಸೂಚನಾ ಪತ್ರವು ನಿರರ್ಥಕವಾಗಿದ್ದು, ತದನುಸಾರವಾಗಿ, ರಿಟ್ ಅರ್ಜಿಯನ್ನು ಅಂಗೀಕರಿಸಬೇಕೆಂದು ಅಗತ್ಯ ಪಡಿಸಬೇಕಾಗಿರುತ್ತದೆ ಹಾಗೂ ಪ್ರಸ್ತಾಪಿತ ಸಭಾ ಸೂಚನೆ ಹಾಗೂ ತತ್ಪರಿಣಾಮದ ಕ್ರಮವನ್ನು ರದ್ದುಪಡಿಸಬೇಕೆಂದು ಅಗತ್ಯಪಡಿಸಲಾಗಿರುತ್ತದೆ.ಸದರಿ ವಾದವನ್ನು ಪುಷ್ಠೀಕರಿಸಲು, 3 (2) ನೇ ನಿಯಮದ ಪರಿಭಾಷೆಯನ್ನು ಉದಾಹರಿಸಿರುತ್ತಾರೆ ಹಾಗೂ ' ನೀಡತಕ್ಕದ್ದು ' ಎಂಬ ಪದಾವಳಿಯ ಬಳಕೆ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದಿದ್ದು, ' ನೀಡು ಅಥವಾ ನೀಡುವುದು ' ಪದಾವಳಿಯನ್ನು, ಉದ್ದೇಶಿತ ವ್ಯಕ್ತಿ ಅಥವಾ ಸ್ವೀಕೃತಿದಾರನ ಕೈಗಳಿಗೆ ತಲುಪುವವರೆಗೆ ಪೂರ್ಣಗೊಳ್ಳದಿರುವಂಥದ್ದೆಂದು ಸರ್ವೋಚ್ಚ ನ್ಯಾಯಾಲಯವು ಅರ್ಥೈಸಿರುತ್ತದೆಂದು ವಾದಿಸಲಾಗಿರುತ್ತದೆ.ಈ ಸಂಬಂಧದಲ್ಲಿ, ಕೆ. ನರಸಿಂಹಯ್ಯ ವಿರುದ್ಧ- ಎಚ್.ಸಿ. ಸಿಂಗ್ರಿಗೌಡ ಮತ್ತು ಇತರರು - ಎಐಆರ್ 1966 ಎಸ್ಸಿ 330, ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಮೇಲೆ ಅವಲಂಬಿತರಾಗಿ ಉದಾಹರಿಸಿರುತ್ತಾರೆ.ಸದರಿ ನಿರ್ಣಯದ 10 ಹಾಗೂ 11 ನೇ ಪ್ಯಾರಾಗಳ ಕಡೆ ಈ ನ್ಯಾಯಾಲಯದ ಗಮನ ಸೆಳೆದು 3 (2) ನೇ ನಿಯಮದಡಿಯಲ್ಲಿ ಆಜ್ಞಾಪಕವೆಂದು ನೋಟೀಸು ನೀಡುವುದು ಉದ್ದೇಶಿತ ವ್ಯಕ್ತಿ ನೋಟೀಸನ್ನು ಸ್ವೀಕರಿಸಿದಾಗ ಮಾತ್ರ ಅದು ಪೂರ್ಣಗೊಳ್ಳುತ್ತದೆಂದು ಹಾಗೂ ಅದು ನೀಡುವುದು ' ಎಂಬ ಪದ ಪರಿಭಾಷೆಯಾದಲ್ಲಿ ಹಾಗೂ ನೀಡತಕ್ಕದ್ದು ಪದಾವಳಿಯನ್ನು ಹಾಗೂ 15 ದಿನಗಳ ಸ್ಪಷ್ಟ ತಿಳುವಳಿಕೆ ಪತ್ರ ' ಪದಾವಳಿಗಳನ್ನು ಜೊತೆಯಾಗಿ ಓದಿಕೊಂಡಲ್ಲಿ, ತರುವಾಯ, 3(2) ನೇ ನಿಯಮದಡಿಯಲ್ಲಿ ಆಜ್ಞಾಪಕವಾದಂಥ ನೋಟೀಸಿನ ಅವಧಿಯನ್ನು ನೋಟೀಸು ಸ್ವೀಕರಿಸಿದ ತರುವಾಯದ ದಿನದಿಂದ ಆರಂಭವಾಗುತ್ತದೆಂಬ ಅನಿವಾರ್ಯ ತೀರ್ಮಾನಕ್ಕೆ ಬರಬೇಕಾಗುತ್ತದೆಂದು ವಾದಿಸಿರುತ್ತಾರೆ.ಈ ಸಂಬಂಧದಲ್ಲಿ ಈತ, ಮುನ್ನಾಲಾಲ್ ಅಗರವಾಲ್-ವಿರುದ್ಧ- ಜಗದೀಶ್ ನರ್ರೆನ್ ಹಾಗೂ ಇತರರು - (2000) 1 ಎಸ್ಸಿಸಿ 31, ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ಪ್ರಸ್ತಾವಗಳ ನಿರೂಪಣೆಯನ್ನು ಬೆಂಬಲಿಸುವಲ್ಲಿ, ಎರಡು ಅಂತಿಮ ದಿನಗಳನ್ನು ಹೊರತುಪಡಿಸಬೇಕಾಗಿರುತ್ತದೆ. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಜೈ ಚರಣ್ ಲಾಲ್ ಅನಲ್-ವಿರುದ್ಧ-ಉತ್ತರ ಪ್ರದೇಶ ಸರ್ಕಾರ ಹಾಗೂ ಇತರರು - ಎಐಆರ್ 1968 ಎಸ್ಸಿ 5, ಮೊಕದ್ದಮೆಯಲ್ಲಿನ ತೀರ್ಪನ್ನು ಉದಾಹರಿಸಿರುತ್ತಾರೆ.ಮುಂದುವರೆದು, ಸಂಗಪ್ಪ ವಿರುದ್ಧ ಸಹಾಯಕ ಆಯುಕ್ತರು, ಬಿಜಾಪುರ ಜಿಲ್ಲೆ ಹಾಗೂ ಮತ್ತೊಬ್ಬರು - ಐಎಲ್ಆರ್ 2004 ಕೆಎಆರ್ 1102, ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪನ್ನು ಉದಾಹರಿಸಿರುತ್ತಾರೆ.ಹಾಗೂ ಸದರಿ ತೀರ್ಪಿನ 9 ನೇ ಪ್ಯಾರಾವನ್ನು ಈ ಮೂಲಕ ಈ ನ್ಯಾಯಾಲಯವು ಈ ಮುಂದಿನಂತೆ ಓದಲಾಗಿರುತ್ತದೆ:

“9. ಪ್ರಸ್ತುತ ಪ್ರಕರಣದಲ್ಲಿ, ನೋಟೀಸನ್ನುದಿನಾಂಕ: 14.1.2004 ರಂದು ಅರ್ಜಿದಾರರಿಗೆ ನೀಡಲಾಗಿರುತ್ತದೆ ಹಾಗೂ ವಿಶೇಷ ಸಭೆಯನ್ನುದಿನಾಂಕ: 29.1.2004 ರಂದು ನಡೆಸಬೇಕೆಂದು ಅಧಿಸೂಚಿಸಲಾಗಿರುತ್ತದೆ.ಆದ್ದರಿಂದ, ಅರ್ಜಿದಾರರಿಗೆ 15 ದಿನಗಳ ಸ್ಪಷ್ಟ ತಿಳುವಳಿಕೆ ಪತ್ರ ನೀಡಿರುವುದಿಲ್ಲವೆಂದು ಸುಸ್ಪಷ್ಟವಾಗಿದ್ದು, 3 ನೇ ನಿಯಮದ 2 ನೇ ಉಪ-ನಿಯಮದ ಆಜ್ಞಾಪಕ ನಿಯಮಗಳು ಅನುವರ್ತನೀಯವಾಗಿರುವುದಿಲ್ಲ.ಹಾಗಾಗಿ, ಪ್ರಶ್ನಿತ ನೋಟೀಸು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ಇತರೆ ವಾದಗಳನ್ನು ಗಣನೆಗೆ ತೆಗೆದುಕೊಳ್ಳದೆ ರದ್ದುಪಡಿಸಲು ತಕ್ಕದ್ದಾಗಿರುತ್ತದೆ .”

6. ಮು ೦ ದುವರೆದು, 3 ( 2) ನೇ ನಿಯಮದ ಉಪಬಂಧಗಳು ಆಜ್ಞಾಪಕವೆಂಬುದನ್ನು ಸ್ಪಷ್ಟವಾಗಿ ನಿರೂಪಿಸಲು ಸಿ. ಪುಟ್ಟಸ್ವಾಮಿ ವಿರುದ್ದ-ಶ್ರೀಮತಿ ಪ್ರೇಮ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ಪೀಠದ ತೀರ್ಪನ್ನು ಉದಾಹರಿಸಿರುತ್ತಾರೆ.ಅಧಿನಿಯಮ 1993 ಕ್ಕೆ ತಿದ್ದುಪಡಿಯಾದ ತರುವಾಯ ಕೂಡ ಕಾನೂನಿನಲ್ಲಿ ನಿರೂಪವು ಬದಲಾಗಿರುವುದಿಲ್ಲವೆಂದು ವಾದಿಸಲು ಮುನಿಯಪ್ಪ ಹಾಗೂ ಇತರರು -ವಿರುದ್ದ ಕರ್ನಾಟಕ ಸರ್ಕಾರ್ ಮೊಕದ್ದಮೆಯಲ್ಲಿ ನೀಡಿದ ವಿಭಾಗೀಯ ಪೀಠದ ತೀರ್ಪನ್ನು ಈತ ಉದಾಹರಿಸಿರುತ್ತಾನೆ ಹಾಗೂ ಪೂರ್ಣ ಪೀಠ ಹಾಗೂ ವಿಭಾಗೀಯ ಪೀಠಗಳೆರಡೂ ಪ್ರವರ್ಗವಾರಾಗಿ 3 ( 2) ನೇ ನಿಯಮವು ಆಜ್ಞಾಪಕವೆಂದು ಸಹ ನಿವೇದಿಸಿಕೊಂಡಿರುತ್ತಾರೆ.

7. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಯು, ಮೇಲಿನ ನಿರ್ಣಯಗಳ ಹಿನ್ನೆಲೆಯಲ್ಲಿ, 15 ದಿನಗಳ ಸ್ಪಷ್ಟ ಸೂಚನಾ ಅವಧಿಯು ಆಜ್ಞಾಪಕವೆಂದು ವಾದಿಸಿದ್ದು, ಸಭಾ ಸೂಚನಾ ಪತ್ರವನ್ನು ಸ್ವೀಕರಿಸುವ ಮೂಲಕ ಅರ್ಜಿದಾರನು ತನ್ನ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾನೆಂದೂ, ಸಭೆಗೆ ಮೌನಸಮ್ಮತಿ ನೀಡಿರುತ್ತಾನೆಂದು ಹಾಗೂ ಪ್ರಸ್ತುತ ರಿಟ್ ಅರ್ಜಿಯನ್ನು ಅವಿಶ್ವಾಸ ನಿರ್ಣಯವನ್ನು ಪರಿಗಣಿಸುವುದಕ್ಕೆ ಸಭೆಯನ್ನು ನಡೆಸುವ ಮೊದಲು ಸಲ್ಲಿಸಬೇಕಿತ್ತೆಂದು ಸಮರ್ಥವಾಗಿ ವಾದಿಸಿರುವುದಿಲ್ಲ.

8. ಪ್ರತಿಯಾಗಿ, ಮುಖ್ಯ ರಿಟ್ ಅರ್ಜಿಯಲ್ಲಿನ 1 ರಿಂದ 4 ರವರೆಗಿನ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀ ಎಂ.ಆರ್ ರಾಜಗೋಪಾಲ್ ಅವರು, ಅರ್ಜಿದಾರರು ಅವಿಶ್ವಾಸ ಮಂಡನೆಯನ್ನು ಪರಿಗಣಿಸಲು ಸಭೆಯನ್ನು ನಡೆಸಿ ಕಾನೂನು ಪ್ರಕ್ರಿಯೆಯನ್ನು ಪೂರ್ವಭಾವಿಯಾಗಿ ಸ್ವಾಧೀನ ಪಡಿಸಿಕೊಳ್ಳುವ ಸಾಧನದಂತೆ ಬಳಸಿಕೊಂಡಿರುತ್ತದೆಂದು ಹಾಗೂ ಇದು ಕೇವಲ ಸಭೆಯನ್ನು ತಪ್ಪಿಸಲು ವಿಳಂಬಕಾರಿ ತಂತ್ರವಾಗಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.ಇವರು ಸದಸ್ಯರಲ್ಲಿ ಹೆಚ್ಚಿನವರು ಅವಿಶ್ವಾಸದ ಪರವಾಗಿ ಮತ ಚಲಾಯಿಸಿರುತ್ತಾರೆಂದು ಹಾಗೂ ಕೇವಲ ಇಬ್ಬರು ಮಾತ್ರ ಅವಿಶ್ವಾಸದ ವಿರುದ್ದ ಮತ ಚಲಾಯಿಸುತ್ತಿದ್ದು ಅವಿಶ್ವಾಸವು ಮುಂದುವರೆದಿರುತ್ತದೆಂದೂ ನಿವೇದಿಸಿಕೊಂಡಿರುತ್ತಾರೆ.ವಿಶ್ವಾಸವನ್ನು ಕಳೆದುಕೊಂಡ ಪ್ರತಿಯೊಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷ, ಸೂಚನೆಯನ್ನು ಹೊರಡಿಸಿದ ಮೇಲೆ, ಪದವನ್ನು ಬಿಟ್ಟುಬಿಡತಕ್ಕದ್ದೆಂದು ಆಜ್ಞಾಪಿಸುವಂಥ ಕರ್ನಾಟಕ ಗ್ರಾಮ ಸ್ವರಾಜ್ ಹಾಗೂ ಪಂಚಾಯತ್ ರಾಜ್ ಅಧಿನಿಯಮ, 1993 (ಸಂಕ್ಷಿಪ್ತವಾಗಿ ಅಧಿನಿಯಮ ಎಂದು ಕರೆಯಲಾಗಿದೆ) ರ 49 ( 1) ನೇ ಪ್ರಕರಣದ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆದು ಪರಿನಿಯಮದ ನಿಬಂಧನೆಗಳಲ್ಲಿ ಸೂಚನೆಯನ್ನು ಹೊರಡಿಸಲಾಗಿದೆಯೆಂದು, ಅರ್ಜಿದಾರನು ಹುದ್ದೆಯನ್ನು ತೊರೆದಿದ್ದಾನೆಂದು ಭಾವಿಸತಕ್ಕದ್ದೆಂದು ಹಾಗೂ ಪ್ರಸ್ತುತ ರಿಟ್ ಅರ್ಜಿಯು, ಕೇವಲ ಶೈಕ್ಷಣಿಕ ಮೌಲ್ಯವನ್ನು ಹೊಂದಿರುತ್ತದೆಂದು ನಿವೇದಿಸಿಕೊಂಡಿರುತ್ತಾರೆ.ಮುಂದುವರೆದು, ಇವನು, ಪದ್ಮನಿ ಸಿಂಘ ವಿರುದ್ದ ಅಸ್ಸಾಂ ಸರ್ಕಾರ ಹಾಗೂ ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಚ ನಿರೂಪಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಅರ್ಜಿದಾರರನ್ನು ನೋಟೀಸನ್ನು ನೀಡುವಲ್ಲಿ ಆಪಾದಿತ ಅಕ್ರಮಗಳಿಗೆ ಕಾರಣವಾದ ಅವನಲ್ಲಿನ ಪೂರ್ವ ಭಾವನೆಗಳನ್ನು ನಿರೂಪಿಸಲು ಅರ್ಜಿದಾರರನ್ನು ಅಗತ್ಯಪಡಿಸಬೇಕೆಂದು ವಾದಿಸಲಾಗಿರುತ್ತದೆ.ರೂಪಿಸಲಾದ ನಿಯಮಗಳು, ಮೂಲ ಕಾನೂನಿಗೆ ಕೇವಲ ಕೈಗಾವಲಾಗಿರುತ್ತವೆ.ಅಂದರೆ, 49 (1) ನೇ ಪ್ರಕರಣ ಹಾಗೂ ನಿಯಮಗಳು, ಪರಿನಿಯಮಗಳಿಂದ ಸಾಧಿಸಬೇಕೆಂದು ಕೋರಿದ ಉದ್ದೇಶದ ನೆರವಿನಲ್ಲಿ ಮಾತ್ರ ರೂಪಿಸಲಾಗಿರುತ್ತದೆ ಹಾಗೂ ಯಾವುದೇ ಇತರ ಮಧ್ಯೆ ಪ್ರವೇಶಿಕೆಯು ಪರಿನಿಯಮದ ಮೂಲಕ ಸಾಧಿಸಬೇಕೆಂದು ಕೋರಿದ ನಿರ್ಣಾಯಕ ಉದ್ದೇಶವನ್ನು ವಿಫಲಗೊಳಿಸಲಾಗಿರುತ್ತದೆ.ಅರ್ಜಿದಾರರು ಪ್ರಚಾರ ಮಾಡಿದಂತಹ ಪ್ರಸ್ತಾವವನ್ನು ವಾದ-ವಿವಾದದ ಕಾರಣಕ್ಕೆ ಸಂಬಂಧಿಸಿದಂತೆ ಒಪ್ಪಿಕೊಂಡಲ್ಲಿ, ಅರ್ಜಿದಾರನು ಯಾವುದೇ ಪೂರ್ವಭಾವನೆಯನ್ನು ನಿರೂಪಿಸಲು ವಿಫಲರಾಗಿರುವಾಗ, ಅರ್ಜಿದಾರರ ವಾದವನ್ನು ತಿರಸ್ಕರಿಸಲು ಅಗತ್ಯಪಡಿಸಬೇಕಾಗುತ್ತದೆ.ಸಭೆಯನ್ನು ನಿಯಮಗಳ ಸಂಪೂರ್ಣ ಅನುಪಾಲನೆಯಲ್ಲಿ ನಡೆಸಬೇಕಾಗಿತ್ತೆಂದು ಹಾಗೂ ದೋಷಪೂರ್ಣ ಸೇವೆಯ ಅಶಕ್ತ ವಿನಾಯಿತಿಯನ್ನು ಪುರಸ್ಕರಿಸಲಾಗುವುದಿಲ್ಲವೆಂದು, ಒಂದು ವೇಳೆ ಪುರಸ್ಕರಿಸಿದಲ್ಲಿ, 49 ನೇ ಪ್ರಕರಣದ ಉಪಬಂಧಗಳನ್ನು ಅಧಿನಿಯಮಿಸುವುದಕ್ಕೆ ಸಂಬಂಧಿಸಿದ ಸದರಿ ಉದ್ದೇಶವನ್ನು ವಿಫಲಗೊಳಿಸಲು ಮುಂದಾಗುತ್ತದೆಂದೂ ವಾದಿಸಿರುತ್ತಾರೆ. ಅಲ್ಲದೆ, ಮುನಿರತ್ನಮ್ಮ -ವಿರುದ್ದ-ಸಹಾಯಕ ಆಯುಕ್ತರು, ಕೋಲಾರ ಉಪ ವಿಭಾಗ ಹಾಗೂ ಮತ್ತೊಬ್ಬರು - ಐಎಲ್ಆರ್ 2007 ಕೆಎಆರ್ 690, ಮೊಕದ್ದಮೆಯಲ್ಲಿ ವಿಭಾಗೀಯ ಪೀಠದ ನಿರ್ಣಯವನ್ನು ನೋಟೀಸಿನ ಅವಧಿಯಲ್ಲಿ ಒಂದು ದಿನದ ಕೊರತೆಯು ಬಹುಸಂಖ್ಯಾತರ ಇಚ್ಚೆಯನ್ನು ವಿರೂಪಗೊಳಿಸುವ ಆಧಾರವಾಗಿರುವುದಿಲ್ಲವೆಂಬುದು ವಾದಿಸಲು ಉದಾಹರಿಸಲಾಗಿರುತ್ತದೆ.ಅಲ್ಲದೆ, ಇವರು, ಅವಿಶ್ವಾಸ ಮಂಡನೆಗೆ

ಸಂಬಂಧಿಸಿದ ವಿಷಯಗಳಲ್ಲಿ ಅಧಿಕ ತಾಂತ್ರಿಕ ದೃಷ್ಟಿಕೋನವನ್ನು ತಪ್ಪಿಸಬೇಕಾಗುತ್ತದೆಂದು ವಾದಿಸಲು ಸದರಿ ನಿರ್ಣಯವನ್ನು ಉದಾಹರಿಸಿರುತ್ತಾರೆ.

9. ಇದಕ್ಕೆ ವಿರುದ್ಧವಾಗಿ, ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು, ಪ್ರಸ್ತಾವಿತ ಪ್ರಸ್ತಾವಕ್ಕೆ ಗ್ರಾಮ ಪಂಚಾಯತಿಯ ಏಳು ಸದಸ್ಯರು ಚಾಲನೆ ನೀಡಿದ್ದು, ನಿಯಮಗಳಡಿಯಲ್ಲಿ ನಿರ್ದಿಷ್ಟಪಡಿಸಲಾದಂಥ ಅಗತ್ಯ ಬಹುಮತಕ್ಕಿಂತ ಹೆಚ್ಚಿನದನ್ನು ಅವರು ರಚಿಸಿದ್ದು, ಆದೇಶವಾಗಿರುವ ಪ್ರಸ್ತಾಪಿತ ವಿಶ್ವಾಸ ಮಂಡನೆಯನ್ನು ಅನುಸರಿಸಿ, ಪ್ರತ್ಯರ್ಜಿದಾರ ಸಂಖ್ಯೆ, 2 ಸಭೆಯ ನೋಟೀಸನ್ನು ಹೊರಡಿಸಲಾಗಿರುತ್ತದೆಂದು ವಾದಿಸಿರುತ್ತಾರೆ.ಉದ್ದೇಶಿತ ಮಂಡನೆಗೆದಿನಾಂಕ: 03.01.2019 ರಂದು ಚಾಲನೆ ನೀಡಿದ್ದು, ತದನುಸಾರವಾಗಿ, 10 ದಿನಗಳ ಅಂತರದ ತರುವಾಯ, ಸಭಾ ಸೂಚನೆಯನ್ನು ನೀಡಲಾಗಿದ್ದು, ಕಾನೂನಿನ ಆಜ್ಞಾಪಕತೆಯನ್ನು ಗಮನದಲ್ಲಿಟ್ಟುಕೊಂಡು, ಸಭೆಯನ್ನುದಿನಾಂಕ: 30.01.2019 ರಂದು ನಡೆಸಬೇಕೆಂದು ಅನುಸೂಚಿಸಲಾಗಿತ್ತು.ನೋಟೀಸನ್ನು ನೋಂದಾಯಿತ ಅಂಚೆ ಮೂಲಕದಿನಾಂಕ: 14.01.2019 ರಂದು ರವಾನಿಸಲಾಗಿತ್ತು ಹಾಗೂ ಅದು 3 (2) ನೇ ನಿಯಮದ ಅನುಪಾಲನೆಯಾಗಿತ್ತು.ಈ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ, ಫಲಿತಾಂಶಗಳನ್ನು ಘೋಷಿಸಲಾಗಿರಲಿಲ್ಲ.ವಾದ ವಿವಾದಗಳ ಸಂದರ್ಭದಲ್ಲಿ, ಮಾನ್ಯ ಎಚ್ಸಿಜಿಪಿಯವರು ಸಭೆ ನಡೆಸಿರುವುದನ್ನು ಹಾಗೂ ಅವಿಶ್ವಾಸ ಮಂಡನೆಯನ್ನು ದೃಢೀಕರಿಸಿರುತ್ತಾರಾದರೂ ಈ ನ್ಯಾಯಾಲಯವು ಆದೇಶವನ್ನು ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ ಪ್ರತ್ಯರ್ಜಿದಾರ ಸ ಂ ಖ್ಯೆ, 2 ಫಲಿತಾಂಶಗಳನ್ನು ಘೋಷಿಸಿರುವುದಿಲ್ಲವೆಂಬುದನ್ನು ನಿವೇದಿಸಿಕೊಂಡಿರುತ್ತಾರೆ.

10. ಸಂಬಂಧಪಟ್ಟ ರಿಟ್ ಅರ್ಜಿಯಲ್ಲಿ, ಅರ್ಜಿದಾರನು ಈಗಲೂ ತಗಚಗೆರೆ ಗ್ರಾಮ ಪಂಚಾಯತ್ನ ಚುನಾಯಿತ ಸದಸ್ಯನಾಗಿರುತ್ತಾನೆ.ದಿನಾಂಕ: 30.06.2014 ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರ ಹುದ್ದೆಗೆ ಚುನಾಯಿತನಾಗಿರುತ್ತಾನೆ.ದಿನಾಂಕ: 28.03.2018 ರಂದು ಈತ ತನಗೆ ಬರೆದಿದ್ದ ಅಂಚೆ ಪತ್ರವನ್ನು ಸ್ವೀಕರಿಸಿರುತ್ತಾನೆ.ಆ ಅಂಚೆ ಪತ್ರವನ್ನು ತೆರೆದು ನೋಡಿದಾಗ ತನಗೆ ಸಭೆಯ ಸೂಚನೆಯನ್ನು ಕಳುಹಿಸಿರುವ ಪತ್ರವೆಂದು ಅವನಿಗೆ ತಿಳಿದು ಬಂದಿರುತ್ತದೆ.ದಿನಾಂಕ: 21.03.2018 ರ ಸಭೆಯ ನೋಟೀಸನ್ನು ಪರಿಶೀಲಿಸಿದ ಮೇಲೆ ತನ್ನ ವಿರುದ್ಧ ಅವಿಶ್ವಾಸ ಮಂಡನೆಯನ್ನು ಪ್ರಸ್ತಾಪಿಸಲಾಗಿದೆಯೆಂದು ಹಾಗೂ ಎರಡನೇ ಪ್ರತ್ಯರ್ಜಿದಾರನು ಅವಿಶ್ವಾಸ ಮಂಡನೆಯನ್ನು ಪರಿಗಣಿಸಲುದಿನಾಂಕ: 05.04.2018 ರಂದು ಸಭೆಯನ್ನು ಕರೆದಿರುತ್ತಾನೆಂದು ತಿಳಿದುಬಂದಿರುತ್ತದೆ.ಈ ನ್ಯಾಯಾಲಯವು ಸಭೆ ನಡೆಸುವುದನ್ನು ತಡೆದು ಯಾವುದೇ ಮಧ್ಯಂತರ ಪರಿಹಾರವನ್ನು ನೀಡುವುದು ಯುಕ್ತವಾದುದೆಂದು ಭಾವಿಸುವುದಿಲ್ಲ.ಆದರೆ ಮತ್ತೊಂದು ಕಡೆ,ದಿನಾಂಕ: 21.03.2018 ರಂದು ಸಭೆಯ ನೋಟೀಸನ್ನು ಅನುಸರಿಸಿರುವ ನಡಾವಳಿಗಳು ರಿಟ್ ಅರ್ಜಿಯಲ್ಲಿನ ಅಂತಿಮ ಆದೇಶಗಳಿಗೆ ಒಳಪಟ್ಟಿರುತ್ತವೆ.ಒಪ್ಪಿಕೊಂಡಂತೆ ಸಭೆಯನ್ನು ನಡೆಸಿ ಉದ್ದೇಶಿತ ಕಾರ್ಯಸೂಚಿಗಳನ್ನು ಅನುಮೋದಿಸಲಾಗಿರುತ್ತದೆ.ಪ್ರಸ್ತುತ ರಿಟ್ ಅರ್ಜಿಯೂ ಸಹ 15 ದಿನಗಳ ಸ್ಪಷ್ಟ ತಿಳುವಳಿಕೆ ಪತ್ರವನ್ನು ಅರ್ಜಿದಾರನಿಗೆ ನೀಡಿರುವುದಿಲ್ಲವೆಂಬ ಒಂದೇ ಆಧಾರವನ್ನು ಮಂಡಿಸುತ್ತಿದ್ದು, ಆ ಮೂಲಕ ಸಭೆಯ ತಿಳುವಳಿಕೆ ಪತ್ರವು ದೋಷಯುಕ್ತವಾಗಿದ್ದು,ದಿನಾಂಕ: 05.04.2018 ರಂದು ನಡೆದ ಸಭೆಯು ನಿರರ್ಥಕವಾಗಿರುತ್ತದೆಂದೂ ವಾದಿಸಲಾಗುತ್ತಿದೆ.ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಮುಖ್ಯ ರಿಟ್ ಅರ್ಜಿಯಲ್ಲಿ ಮಾನ್ಯ ನ್ಯಾಯವಾದಿಗಳಾದ ಶ್ರೀ ಪಿ. ಪಿ. ಹೆಗಡೆಯವರು ಮಂಡಿಸಿದ ವಾದಗಳನ್ನು ಅನ್ವಯಿಸಿಕೊಳ್ಳಬೇಕೆಂದು ನಿವೇದಿಸಿಕೊಂಡಿರುತ್ತಾರೆ.

11. ಎರಡನೇ ರಿಟ್ ಅರ್ಜಿಯನ್ನು ಅಧ್ಯಕ್ಷ ಹುದ್ದೆಗೆ ಸಂಬಂಧಿಸಿದಂತೆ ಚುನಾವಣೆಯನ್ನು ಅಧಿಸೂಚಿಸಲಾದಂಥದಿನಾಂಕ: 14.11.2018 ರ ನಡಾವಳಿಗಳನ್ನು ಪ್ರಶ್ನಿಸಿ ಸದರಿ ಅರ್ಜಿದಾರನು ಸಲ್ಲಿಸಿರುತ್ತಾನೆ.ಈ ನ್ಯಾಯಾಲಯವು ಮಧ್ಯಂತರ ಆದೇಶದ ಮೂಲಕದಿನಾಂಕ: 24.11.2018 ರಂದು ನಡೆದ ಚುನಾವಣೆಯ ಫಲಿತಾಂಶವನ್ನು ಘೋಷಿಸುವುದರಿಂದ ಪ್ರಾಧಿಕಾರಿಗಳನ್ನು ನಿರ್ಬಂಧಿಸಿರುತ್ತದೆ.

12. ಮಾನ್ಯ ವಕೀಲರುಗಳ ವಾದವನ್ನು ಆಲಿಸಿ, ಬೇರೆ ಬೇರೆ ವಾದಗಳು ಹೊಂದಿರುವ ದೃಢಕ್ತಿಗಳನ್ನು ಗಮನಿಸಿದಾಗ, ಪರಿಗಣನೆಗಾಗಿ ಬಂದ ಅಂಶವೆಂದರೆ ರಿಟ್ ಅರ್ಜಿಯಲ್ಲಿನ ಪ್ರಶ್ನಿತ ಸಭಾ ಸೂಚನೆಗಳು 3 ( 2) ನೇ ನಿಯಮದ ಆಜ್ಞಾಪನಕ್ಕೆ ವಿರುದ್ಧವಾಗಿರುವುದರಿಂದ ನಿರರ್ಥಕವಾದುದಾಗಿರುತ್ತದೆಯೇ?

13. ವಿಶೇಷ ಸಾರ್ವತ್ರಿಕ ಸಭೆಯ ಮೂರು ಸ್ಪಷ್ಟ ದಿನಗಳ ನೋಟೀಸನ್ನು ನೀಡಿರುವುದಿಲ್ಲವೆಂಬ ವಾದವನ್ನು ಸರ್ವೋಚ್ಚ ನ್ಯಾಯಾಲಯವು ಪರಿಗಣಿಸಿರುವಲ್ಲಿನ ಕೆ. ನರಸಿಂಹಯ್ಯ -ವಿರುದ್ಧ ಎಚ್. ಸಿ. ಸಿಂಗ್ರಿಗೌಡ ಮತ್ತು

ಇತರರು (ಮೇಲಿನ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿರುವ ಕಾನೂನಿನ ಹಿನ್ನೆಲೆಯಲ್ಲಿ, ಸದರಿ ವಿವಾದಾಂಶವು ದೀರ್ಘಕಾಲಿನವಾಗಿ ಈ ನ್ಯಾಯಾಲಯವನ್ನು ನಿರ್ಬಂಧಿಸಲು ಸಾಧ್ಯವಿರುವುದಿಲ್ಲ.ಹಾಗಾಗಿ, ಸಭೆಯನ್ನು ಅಸಿಂಧುಗೊಳಿಸಲಾಗಿರುತ್ತದೆ ಹಾಗೂ 10 ನೇ ಹಾಗೂ 11 ನೇ ಪ್ಯಾರಾಗಳಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ.ಆ ಮೂಲಕ ಸರ್ವೋಚ್ಚ ನ್ಯಾಯಾಲಯವು, ಉದ್ದೇಶಿತ ಸ್ವೀಕರ್ತನಿಗೆ ತಲುಪದ ಹೊರತು ವಿಧಿಸುವ ಯಾವುದೂ ಪೂರ್ಣಗೊಳ್ಳುವುದಿಲ್ಲವೆಂದು ಕಾನೂನನ್ನು ಇತ್ಯರ್ಥಪಡಿಸುತ್ತದೆ.

"10. ಇದು, ವಿಶೇಷ ಸಾರ್ವತ್ರಿಕ ಸಭೆಯ ಮೂರು ದಿನಗಳ ನೋಟೀಸನ್ನು ನೀಡದಿರುವುದರಿಂದ ಸಭೆಯು ಅಸಿಂಧುವಾಗಿದೆಯೆಂಬ ಮುಖ್ಯ ವಾದಕ್ಕೆ ನಮ್ಮನ್ನು ತಂದು ನಿಲ್ಲಿಸುತ್ತದೆ.ನಮಗೆ ನೋಟೀಸನ್ನು ' ಕಳುಹಿಸುವುದು ' ನೋಟೀಸನ್ನು ನೀಡುವುದಕ್ಕೆ ಕಾರಣವಾಗುತ್ತದೆಂದು ಉಚ್ಚ ನ್ಯಾಯಾಲಯದ ವಾದವನ್ನು ಒಪ್ಪಿಕೊಳ್ಳುವುದು ಕಷ್ಟವಾಗುತ್ತದೆ.

11. ಇಂಗ್ಲಿಷ್ ಭಾಷೆಯಲ್ಲಿ ಸಾಮಾನ್ಯವಾಗಿ ಅರ್ಥೈಸಿಕೊಳ್ಳುವಂತೆ ನೀಡುವುದು ' ಪದವು, ಯಾವ ವ್ಯಕ್ತಿಗೆ ನೀಡಬೇಕಾಗಿರುತ್ತದೋ ಆತನಿಗೆ ಅದು ತಲುಪದ ಹೊರತು ಆ ಪ್ರಕ್ರಿಯೆ ಪೂರ್ಣಗೊಳ್ಳುವುದಿಲ್ಲ.ಆದಾಗ್ಯೂ, ಕಾನೂನಿನ ದೃಷ್ಟಿಯಲ್ಲಿ, ನೀಡುವುದು ' ಎಂದರೆ, ಯಾವ ವ್ಯಕ್ತಿಗೆ ನೀಡಲಾದ, ಅವನು ಒಪ್ಪಿಕೊಳ್ಳದ ಹಲವಾರು ವಿಷಯಗಳಿದ್ದಾಗ್ಯೂ ಪೂರ್ಣಗೊಂಡಿರುತ್ತದೆ.ಆದ್ದರಿಂದ, ಕಾನೂನಿನಲ್ಲಿ ನೋಟೀಸನ್ನು ಕೊಡುವುದು ಎಂದರೆ ಒಬ್ಬ ವ್ಯಕ್ತಿ ಕೊಟ್ಟ ನೋಟೀಸನ್ನು ಸ್ವೀಕರಿಸದೆ ನಿರಾಕರಿಸಿದ್ದಾಗ್ಯೂ ಕೂಡ ನೋಟೀಸನ್ನು ನೀಡಲಾಗಿರುವುದು ಎಂದೇ ಆಗಿರುತ್ತದೆ.ಆದಾಗ್ಯೂ, ನಾವು, ನೋಟೀಸನ್ನು ನೀಡುವ ಕಾನೂನಾತ್ಮಕ ಕರ್ತವ್ಯ ನಿರ್ವಹಿಸುವ ವ್ಯಕ್ತಿಯು ಸಾಧ್ಯವಾದಷ್ಟು ಬೇಗ, ಯಾರಿಗೆ ನೋಟೀಸನ್ನು ನೀಡಬೇಕಾಗಿರುತ್ತದೋ ಆ ವ್ಯಕ್ತಿಯ ವಿಳಾಸಕ್ಕೆ ನೋಟೀಸನ್ನು ರವಾನಿಸಿದರೆ, ನೀಡುವುದು ಪೂರ್ಣಗೊಳ್ಳುತ್ತದೆಂಬ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾಧಿಕಾರ ಅಥವಾ ತತ್ವವನ್ನು ಕಂಡುಕೊಳ್ಳಲಾಗುವುದಿಲ್ಲ.ಆದ್ದರಿಂದ, 10 ನೇ ಅಕ್ಟೋಬರ್‌ಂದು ಎಲ್ಲಾ ಕೌನ್ಸಿಲರ್ಗಳಿಗೆ ನೋಟೀಸುಗಳನ್ನು ನೀಡಲಾಗಿರುತ್ತದೆಂದು ಯೋಚಿಸಿ ಉಚ್ಚ ನ್ಯಾಯಾಲಯವು ತಪ್ಪನ್ನು ಎಸಗಿರುತ್ತದೆಂಬುದು ನಮ್ಮ ಅಭಿಪ್ರಾಯವಾಗಿರುತ್ತದೆ.ನಮ್ಮ ಪ್ರಕಾರ, ಕೌನ್ಸಿಲರುಗಳಲ್ಲಿ ಐದು ಜನಕ್ಕೆ ನೀಡಲಾದ ನೋಟೀಸು ಮೂರು ಸ್ಪಷ್ಟ ದಿನಗಳಿಗಿಂತ ಕಡಿಮೆಯಿರುತ್ತದೆ.

14. ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನಿನೊಂದಿಗೆ ಯಾವುದೇ ವಿವಾದವಿರುವುದಿಲ್ಲ.ಮೈಸೂರು ಪಟ್ಟಣ ಪುರಸಭೆಗಳ ಅಧಿನಿಯಮದ 27 ( 3) ನೇ ಪ್ರಕರಣವನ್ನು ಅರ್ಥ ವಿವರಣೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಕೌನ್ಸಿಲರ್ಗೆ ನೋಟೀಸನ್ನು ನೀಡುವ ಮುಖ್ಯ ಉದ್ದೇಶವೆಂದರೆ, ಅವರೆಲ್ಲಾ ಸಭೆಗೆ ಹಾಜರಾಗಲು ಅವರುಗಳ ಇತರೆ ವ್ಯವಹರಣೆಗಳನ್ನು ವ್ಯವಸ್ಥೆಗೊಳಿಸಿಕೊಳ್ಳಲು ಕೌನ್ಸಿಲರ್ಗಳಿಗೆ ಸಂಬಂಧಿಸಿದಂತೆ ಸಾಧ್ಯವಾಗುವಂತೆ ಮಾಡುವುದಾಗಿರುತ್ತದೆ.ಅದರಲ್ಲಿನ, ಅಪೀಲುದಾರರು ಪ್ರಚಾರ ಮಾಡಿದ ಪ್ರಕರಣದಲ್ಲಿ ಪುರ ಸಭೆಯ ಕೆಲವು ಕೌನ್ಸಿಲರ್ಗಳು ಅಧಿನಿಯಮದಡಿಯಲ್ಲಿ ನಿರ್ದಿಷ್ಟಪಡಿಸಿದಂಥ ಮೂರು ಸ್ಪಷ್ಟ ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ನೋಟೀಸನ್ನು ಸ್ವೀಕರಿಸಿದ್ದು, ಸದರಿ ಅಕ್ರಮವು ಹೊರಡಿಸಿದ ಠರಾವನ್ನು ನಿರರ್ಥಕಗೊಳಿಸಿದೆಯೆಂದು ವಾದಿಸಲಾಗಿರುತ್ತದೆ.ಸರ್ವೋಚ್ಚ ನ್ಯಾಯಾಲಯವು, ಚ ಐದು ಜನ ಕೌನ್ಸಿಲರ್ಗಳಿಗೆ ನೀಡಲಾದ ನೋಟೀಸುಗಳಲ್ಲಿ ಮೂರು ದಿನಗಳಿಗಿಂತ ಕಡಿಮೆ ದಿನಗಳ ಕಾಲಾವಧಿಯಾಗಿರುತ್ತದೆಂಬ ವಾದವನ್ನು ಒಪ್ಪಿಕೊಂಡಿದ್ದಾಗ್ಯೂ, ನೋಟೀಸನ್ನು ನೀಡುವಲ್ಲಿನ ಅಕ್ರಮವು ಸಭೆ ಅಥವಾ ಹೊರಡಿಸಿದ ಠರಾವನ್ನು ತಲುಪಿಸುವಲ್ಲಿ ನಿರ್ಥಕವಾಗಿರುತ್ತದೆಂಬ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲ.ಹಾಗೆ ಅಭಿಪ್ರಾಯಪಡಲು, ಸರ್ವೋಚ್ಚ ನ್ಯಾಯಾಲಯವು ಅಧಿನಿಯಮದ 26 ನೇ ಪ್ರಕರಣದ ಉಪಬಂಧಗಳ ಮೇಲೆ ಅವಲಂಬಿಸಿದ್ದು, ಅದು ಈ ಮುಂದಿನಂತಿರುತ್ತದೆ:

"ಈ ಅಧಿನಿಯಮದಡಿಯಲ್ಲಿ ನೇಮಕವಾದ ಪೌರಸಭೆಗೆ ಅಥವಾ ಯಾವುದೇ ಸಮಿತಿಯ ಠರಾವನ್ನು, ಯಾರೇ ಕೌನ್ಸಿಲರ್ ಅಥವಾ ಸದಸ್ಯರಿಗೆ ನೋಟೀಸನ್ನು ಜಾರಿಗೊಳಿಸುವಲ್ಲಿನ ಯಾವುದೇ ಅಕ್ರಮದ ಕಾರಣದ ಮೇಲೆ ಅಸಿಂಧುವೆಂದು ಭಾವಿಸತಕ್ಕದ್ದಲ್ಲ.ಪರಂತು, ಪುರಸಭೆ ಅಥವಾ ಸಮಿತಿಯ ನಡಾವಳಿಗಳನ್ನು ಅಂಥ ಅಕ್ರಮದಿಂದ ಪ್ರತಿಕೂಲವಾಗಿ ಬಾಧಕಗೊಳಿಸಲಾಗುವುದಿಲ್ಲ."

15. ಈ ನ್ಯಾಯಾಲಯದ ಪರಿಗಣಿತ ಅಭಿಪ್ರಾಯದಲ್ಲಿ, ಸದರಿ ತೀರ್ಪು ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ನಿಷ್ಪಕ್ಷಪಾತವಾಗಿ ಅನ್ವಯವಾಗುತ್ತದೆ.ಅವಿಶ್ವಾಸ ಮಂಡನೆಯನ್ನು, ಅವಿಶ್ವಾಸವನ್ನು ವ್ಯಕ್ತಪಡಿಸುವ ಠರಾವನ್ನು ಹೊರಡಿಸಲು ಶಕ್ತಗೊಳಿಸುವಂಥ ಅಧಿನಿಯಮದ 49 ನೇ ಪ್ರಕರಣದಡಿಯಲ್ಲಿ ಮುಂದುವರೆಸುತ್ತದೆ ಹಾಗೂ ಮೂಲಕ ಅಧ್ಯಕ್ಷ ಪದದಲ್ಲಿನ ಅಧಿಭೋಗದಾರನ ಸ್ಥಳ ಕಳೆದುಕೊಂಡಿರುತ್ತಾನೆ.49 ನೇ ಪ್ರಕರಣವು 1993 ನೇ ಅಧಿನಿಯಮದ ಅಧ್ಯಾಯ-III ರಲ್ಲಿ ಕಂಡುಬರುತ್ತದೆ.ಸದರಿ ಅಧ್ಯಾಯದಲ್ಲಿಯೇ 57 ನೇ ಪ್ರಕರಣವೂ ಬರುತ್ತದೆ.57 ನೇ ಪ್ರಕರಣವು, ನೋಟೀಸನ್ನು ನೀಡುವಲ್ಲಿ ಕೆಲವು ಅಕ್ರಮಗಳನ್ನು ಮೀರಿ ಗ್ರಾಮ ಪಂಚಾಯತ್ ಅಥವಾ ಯಾವುದೇ ಸಮಿತಿಯ ಠರಾವುಗಳನ್ನು ಸಿಂಧುಗೊಳಿಸುತ್ತದೆ.57 ನೇ ಪ್ರಕರಣದ ( 2) ನೇ ಉಪ-ಪ್ರಕರಣವು ಈ ಮುಂದಿನಂತಿರುತ್ತದೆ:

(2) ಈ ಅಧಿನಿಯಮದಡಿಯಲ್ಲಿ ರಚಿಸಲಾದ ಗ್ರಾಮ ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿಯ ಠರಾವನ್ನು, ಯಾರೇ ಸದಸ್ಯರನ ಮೇಲೆ ನೋಟೀಸನ್ನು ನೀಡುವಲ್ಲಿನ ಯಾವುದೇ ಅಕ್ರಮದ ಕಾರಣದ ಮೇಲೆ ಅಸಿಂಧುವೆಂದು ಭಾವಿಸತಕ್ಕದ್ದಲ್ಲ.ಪರಂತು, ಗ್ರಾಮ ಪಂಚಾಯತ್ ಅಥವಾ ಸಮಿತಿಯ ನಡಾವಳಿಗಳನ್ನು ಅಂಥ ಅಕ್ರಮಗಳು ಪ್ರತಿಕೂಲವಾಗಿ ಬಾಧಕಗೊಳಿಸಲಾಗುವುದಿಲ್ಲ.

16. 57 ನೇ ಪ್ರಕರಣದ ( 3) ನೇ ಉಪ-ಪ್ರಕರಣವು ಭಾವಿತ ಉಪಬಂಧವಾಗಿದ್ದು, ಸದರಿ ಉಪಬಂಧದ ಕಾರ್ಯಾಚರಣೆಯ ಮೂಲಕ, ಪಂಚಾಯತಿಗಳ ಎಲ್ಲಾ ಅಂಥ ಠರಾವುಗಳು ಅಥವಾ ಯುಕ್ತವಾಗಿ ನಡೆಸಿದ ಸಮಿತಿಯ ಸಭೆಗಳು ಸಿಂಧುವಾದವುಗಳೆಂದು ಭಾವಿಸುತ್ತದೆ.

17. ರಿಟ್ ಅರ್ಜಿಗಳ ಅಹವಾಲು ಮಾಡಿಕೊಳ್ಳುತ್ತಿರುವ ಒಂದೇ ವಿಚಾರವೆಂದರೆ, ಸಕ್ಷಮ ಪ್ರಾಧಿಕಾರ ಅಂದರೆ ಸಹಾಯಕ ಆಯುಕ್ತರು ಕರೆದ ಸಭೆಯು ದಿನಗಳ ಸ್ಪಷ್ಟ ನೋಟೀಸನ್ನು ನೀಡುವಲ್ಲಿ ಪ್ರಾಧಿಕಾರದ ಕಡೆಯಿಂದಾದ ವೈಫಲ್ಯದ ಕಾರಣದ ಮೇಲೆ ಇದು ನಿರರ್ಥಕವಾದುದಾಗಿರುತ್ತದೆ ಎಂಬುದಾಗಿರುತ್ತದೆ.ಅರ್ಜಿದಾರರಲ್ಲಿ ಯಾರೊಬ್ಬರೂ ತಮಗೆ ಉಂಟಾದ ಯಾವುದೇ ಪ್ರತಿಕೂಲದ ಸಂದರ್ಭವನ್ನು ಹೇಳಿಕೊಂಡಿರುವುದಿಲ್ಲ.ನೋಟೀಸನ್ನು ನೀಡುವಲ್ಲಿನ ಸದರಿ ಅಕ್ರಮದಿಂದ ಅವರಿಗೆ ಹೇಗೆ ಪ್ರತಿಕೂಲವಾಯಿತೆಂಬುದನ್ನು ಅರ್ಜಿದಾರರು ವಿವರಿಸುವುದಿಲ್ಲ.57 ನೇ ಪ್ರಕರಣದ (2) ನೇ ಹಾಗೂ (3) ನೇ ಉಪ-ಪ್ರಕರಣಗಳ ಕಲ್ಪಿತ ಓದಿನ ಮೇಲೆ, ಪಂಚಾಯತ್ನ ಸದಸ್ಯರು, ನೋಟೀಸನ್ನು ನೀಡುವಲ್ಲಿ ಯಾವುದೇ ಅಕ್ರಮದಿಂದ ಪ್ರತಿಕೂಲವಾಗಿ ಬಾಧಕವಾಗಿದೆಯೆಂದು ನಿರೂಪಿಸದ ಹೊರತು ಹಾಗೂ ನಿರೂಪಿಸುವವರೆಗೂ ನಡೆಸಲಾದ ಸಭೆ ಹಾಗೂ ಹೊರಡಿಸಲಾದ ಠರಾವುಗಳನ್ನು ಯುಕ್ತವಾಗಿ ನಡೆಸಲಾಗಿದೆ ಹಾಗೂ ಹೊರಡಿಸಲಾಗಿದೆಯೆಂದೇ ಭಾವಿಸುತ್ತದೆಂಬುದು ನಿಚ್ಚಳವಾಗಿ ಕಂಡುಬರುತ್ತದೆ.ಈ ಹಿಂದೆ ಹೇಳಲಾದ ಕೆ. ನರಸಿಂಹ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಅಧಿನಿಯಮದ 57 (2) ನೇ ಚ ಪ್ರಕರಣದೊಂದಿಗೆ ಸಮಬಲವಾಗಿರುವಂಥ 36 ನೇ ಪ್ರಕರಣದ ಉಪಬಂಧಗಳನ್ನು ಗಮನಿಸಿದ ತರುವಾಯ, ಈ ಮುಂದಿನಂತೆ ಅಭಿಪ್ರಾಯಪಡಲು ಕೋರಲಾಗಿದ್ದು, ತರುವಾಯ, ಅಪೀಲನ್ನು ವಜಾಗೊಳಿಸಲೂ ಸಹ ಕೋರಲಾಗಿರುತ್ತದೆ.

"16. ಈ ಸಂಬಂಧದಲ್ಲಿ, ಅಧಿನಿಯಮದ 36 ನೇ ಪ್ರಕರಣದಲ್ಲಿನ ಒಂದು ಉಪಬಂಧವನ್ನು ಗಮನಿಸುವುದು ಪ್ರಮುಖವಾಗಿರುತ್ತದೆ.ಅದು ಈ ಮುಂದಿನಂತಿರುತ್ತದೆ:

" ಈ ಅಧಿನಿಯಮದಡಿಯಲ್ಲಿ ನೇಮಕವಾದ ಪೌರಸಭೆಗೆ ಅಥವಾ ಯಾವುದೇ ಸಮಿತಿಯ ಠರಾವನ್ನು, ಯಾರೇ ಕೌನ್ಸಿಲರ್ ಅಥವಾ ಸದಸ್ಯರಿಗೆ ನೋಟೀಸನ್ನು ಜಾರಿಗೊಳಿಸುವಲ್ಲಿನ ಯಾವುದೇ ಅಕ್ರಮದ ಕಾರಣದ ಮೇಲೆ ಅಸಿಂಧುವೆಂದು ಭಾವಿಸತಕ್ಕದ್ದಲ್ಲ.ಪರಂತು, ಪುರಸಭೆ ಅಥವಾ ಸಮಿತಿಯ ನಡಾವಳಿಗಳನ್ನು ಅಂಥ ಅಕ್ರಮದಿಂದ ಪ್ರತಿಕೂಲವಾಗಿ ಬಾಧಕಗೊಳಿಸಲಾಗುವುದಿಲ್ಲ."

17. ಈ ಉಪಬಂಧದಲ್ಲಿ ನಮೂದಿಸಿರುವ ನೋಟೀಸನ್ನು ಜಾರಿ ಮಾಡುವುದನ್ನು ಕೌನ್ಸಿಲರುಗಳಿಗೆ ನೋಟೀಸನ್ನು ನೀಡುವುದಕ್ಕೆ ಉಲ್ಲೇಖಿಸಲಾಗುತ್ತದೆಂದು ಯೋಚಿಸುವುದು ಯುಕ್ತವಾದುದಾಗಿರುತ್ತದೆ.ಸುಸ್ಪಷ್ಟವಾಗಿ, ನೋಟೀಸನ್ನು ನೀಡುವಲ್ಲಿನ ರೀತಿಯಲ್ಲಿ ಯಾವುದೇ ಅಕ್ರಮವನ್ನು ಯಾರೇ ಕೌನ್ಸಿಲರ್ನ ಮೇಲೆ ನೋಟೀಸನ್ನು ಹೊರಡಿಸುವಲ್ಲಿನ ಅಕ್ರಮ-ಪದಗಳು ಒಳಗೊಳ್ಳುತ್ತವೆ.ಆದಾಗ್ಯೂ, ವಿಧಾನ ಮಂಡಲದಲ್ಲಿ 36 ನೇ ಪ್ರಕರಣದಲ್ಲಿ ಇಂಥ ಉಪಬಂಧವನ್ನು ರೂಪಿಸುವಲ್ಲಿ ನೋಟೀಸನ್ನು

ಹೊರಡಿಸುವ ವಿಧಾನದ ಅಕ್ರಮವನ್ನು ಮಾತ್ರ ಯೋಚಿಸಿರದೆ, ಅಗತ್ಯಪಡಿಸಿದಂತೆ ಪೂರ್ಣಾವಧಿಯ ನೋಟೀಸನ್ನು ನೀಡಲು ನಿರಸಿತಗೊಳಿಸುವುದನ್ನು ಆಲೋಚಿಸಿರುತ್ತದೆಂಬುದು ನಮಗೆ ಕಂಡು ಬಂದಿರುತ್ತದೆ.

18. ಈ ಸಂಬಂಧದಲ್ಲಿ, ಒಂದು ಪ್ರದೇಶದ ಪರಿಷತ್ತುಗಳು ಹಾಗೂ ಒಂದು ಪ್ರಾಂತ್ಯದ ಪರಿಷತ್ತುಗಳ ಸಭೆಗಳಿಗೆ ಸಂಬಂಧಿಸಿದಂತೆ ಇಂಗ್ಲಿಷ್ ಕಾನೂನು, ಸಭೆಗೆ (ಪರಿಷತ್ತಿನ ಪ್ರತಿಯೊಬ್ಬ ಸದಸ್ಯನಿಗೂ ನೀಡಬೇಕೆಂದು ಅಗತ್ಯ ಪಡಿಸಿರುವಂಥ) ಹಾಜರಾಗಲು ಸಮನ್ಸ್‌ಗಳನ್ನು ಜಾರಿಗೊಳಿಸುವ ಇಚ್ಛೆಯು ಸಭೆಯ ಸಿಂಧುತ್ವಕ್ಕೆ ಬಾಧಕ ಗೊಳಿಸುವುದಿಲ್ಲವೆಂಬ ನಿರ್ದಿಷ್ಟ ಉಪಬಂಧವನ್ನು ಒಳಗೊಂಡಿರುತ್ತವೆ.ಮೈಸೂರು ಪಟ್ಟಣ ಪುರಸಭೆಗಳ ಅಧಿನಿಯಮ, 1951 ನ್ನು ಅಧಿನಿಯಮಿತಿಗೊಳಿಸಿದಂಥ ವಿಧಾನ ಮಂಡಲವು, ಇಂಗ್ಲಿಷ್ ಕಾನೂನಿನಲ್ಲಿನ ಈ ಉಪಬಂಧಗಳ ಬಗೆಗೆ ಅರಿತಿತ್ತೆಂಬುದನ್ನು ಕಲ್ಪಿಸಿಕೊಳ್ಳಬಹುದಾಗಿರುತ್ತದೆ. ನೋಟೀಸನ್ನು ಜಾರಿಗೊಳಿಸುವ ವೈಫಲ್ಯವು ಸಭೆಯನ್ನು ಅಸಿಂಧುಗೊಳಿಸುವುದಿಲ್ಲವೆಂದು ಹೇಳುವಷ್ಟು ದಾರಿಯನ್ನು ಕ್ರಮಿಸಬೇಕಾಗಿರುವುದಿಲ್ಲ.ಅದಕ್ಕೆ ಬದಲಾಗಿ, ನೋಟೀಸನ್ನು ಜಾರಿಗೊಳಿಸುವಲ್ಲಿನ ಯಾವುದೇ ಅಕ್ರಮವು ಪರಿಷತ್ತಿನ ಠರಾವನ್ನು ಅಸಿಂಧುಗೊಳಿಸುವುದಿಲ್ಲ.ಪರಂತು, ನಡಾವಳಿಗಳು ಅಂಥ ಅಕ್ರಮಗಳ ಮೂಲಕ ಪ್ರತಿಕೂಲವಾಗಿ ಬಾಧಕವಾಗುವುದಿಲ್ಲ.ನೋಟೀಸನ್ನು ಜಾರಿಗೊಳಿಸುವಲ್ಲಿನ ಅಕ್ರಮಗಳಿಗೆ ಸಂಬಂಧಿಸಿದಂತೆ ನೀಡಲಾದ ನೋಟೀಸು ಅಗತ್ಯ ಅವಧಿಗಿಂತ ಕಡಿಮೆಯಾಗಿ ಅದು ಅಕ್ರಮವೆಂದು ಪರಿಗಣಿತವಾದಲ್ಲಿ ಅಂಥ ಉಪಬಂಧವನ್ನು ರೂಪಿಸುವ ತರ್ಕವು ಬಲವಾದುದಾಗಿರುತ್ತದೆ.

19. ಮುಂದುವರೆದು, 36 ನೇ ಪ್ರಕರಣದಲ್ಲಿನ ಈ ಉಪಬಂಧದ ಅಸ್ತಿತ್ವವು, 27 ( 3) ನೇ ಪ್ರಕರಣದಲ್ಲಿ ನೀಡಲೇಬೇಕಾದಂಥ ಯಾವುದೇ ಗೊತ್ತುವಳಿ ಅಥವಾ ಪ್ರಸ್ತಾವಕ್ಕೆ ಸಂಬಂಧಿಸಿದ ಉಪಬಂಧಗಳು ಕೇವಲ ನಿರ್ದೇಶನಾತ್ಮಕವಾಗಿರುತ್ತವೆ ಹಾಗೂ ಆಜ್ಞಾಪಕ ವಾಗಿರುವುದಿಲ್ಲವೆಂದು ಆಲೋಚಿಸಲು ಕಾರಣವನ್ನು ಒದಗಿಸುತ್ತವೆ.

20. ಆದ್ದರಿಂದ, ಕೆಲವು ಕೌನ್ಸಿಲರುಗಳು ಮೂರು ಸ್ಪಷ್ಟ ದಿನಗಳಿಗಿಂತ ಕಡಿಮೆ ಅವಧಿಯಲ್ಲಿ ಸಭೆಯ ನೋಟೀಸನ್ನು ಸ್ವೀಕರಿಸಿರುತ್ತಾರೆಂಬ ವಾಸ್ತವಾಂಶವು ಸ್ವತಃ ಸಭೆಯ ನಡಾವಳಿಗಳನ್ನು ರೂಪಿಸುವುದಿಲ್ಲ ಅಥವಾ ಅಲ್ಲಿ ಹೊರಡಿಸಿದ ಠರಾವನ್ನು ಅಸಿಂಧುಗೊಳಿಸುವುದಿಲ್ಲವೆಂದು ನಾನು ಅಭಿಪ್ರಾಯಪಡುತ್ತೇವೆ.ಇದು ನಡಾವಳಿಗಳು ಇಂಥ ಅಕ್ರಮಗಳ ಮೂಲಕ ಪ್ರತಿಕೂಲವಾಗಿ ಬಾಧಕವಾದಲ್ಲಿ ಅಸಿಂಧುವಾಗುತ್ತವೆ ಎಂಬುದನ್ನು ಸುಸ್ಥಾಪಿಸುತ್ತದೆ.ಈಗಾಗಲೇ ಹೇಳಲಾದಂತೆ, ಇಪ್ಪತ್ತು ಕೌನ್ಸಿಲರುಗಳ ಪೈಕಿ ಹತ್ತೊಂಭತ್ತು ಜನ ಹಾಜರಾಗಿರುತ್ತಾರೆ.ಈ 19 ಜನರ ಪೈಕಿ 15 ಜನರು ಅಪೀಲುದಾರನ ವಿರುದ್ಧ ಅವಿಶ್ವಾಸದ ಪರವಾಗಿ ಮತ ಚಲಾಯಿಸಿರುತ್ತಾರೆ.ಹಾಗಾಗಿ, ಸಭೆಯ ನಡಾವಳಿಗಳು ನೋಟೀಸನ್ನು ಜಾರಿಗೊಳಿಸುವಲ್ಲಿ ಅಕ್ರಮವಾಗಿದೆ ' ಎಂಬುದರ ಮೂಲಕ ಅ ಪ್ರತಿಕೂಲವಾಗಿ ಬಾಧಕವಾಗಿದೆಯೆ ಂ ದು ಯೋಚಿಸ ಲು ನಿರುಪಾಧಿಕವಾಗಿ ಯಾವುದೇ ಕಾರಣವಿರುವುದಿಲ್ಲ.

21. ಆದ್ದರಿಂದ, ಕೆಲವು ಕೌನ್ಸಿಲರ್ಗಳಿಗೆ ಮೂರು ಸ್ಪಷ್ಟ ದಿನಗಳ ನೋಟೀಸನ್ನು ನೀಡುವಲ್ಲಿ ಆಗುವ ವೈಫಲ್ಯವು ಸಭೆಯ ಸಿಂಧುತ್ವಕ್ಕೆ ಅಥವಾ ಅಪೀಲುದಾರರ ವಿರುದ್ಧ ಅವರು ಹೊರಡಿಸಿದ ಅವಿಶ್ವಾಸ ಮಂಡನೆಯ ಠರಾವಿಗೆ ಬಾಧಕವಾಗುವುದಿಲ್ಲವೆಂಬ ಅಭಿಪ್ರಾಯಕ್ಕೆ ನಾವು ಬಂದಿರುತ್ತೇವೆ."

18. 17 ನೇ ಪ್ಯಾರಾದ ಪರಿಶೀಲನೆ ಮೇಲೆ, ಸರ್ವೋಚ್ಚ ನ್ಯಾಯಾಲಯವು, ಚ ಕೆಲವು ಸ್ಪಷ್ಟ ದಿನಗಳ ನೋಟೀಸನ್ನು ನೀಡುವಲ್ಲಿನ ವೈಫಲ್ಯವು ಅಕ್ರಮವಾಗಿದ್ದು, ಅದು ನೋಟೀಸನ್ನು ಜಾರಿಗೊಳಿಸುವಲ್ಲಿನ ಅಕ್ರಮದ ಮೂಲಕ ಒಳಗೊಳ್ಳುತ್ತದೆಂದು ಅಭಿಪ್ರಾಯಪಟ್ಟಿರುತ್ತದೆಂಬುದು ಸುಸ್ಪಷ್ಟವಾಗಿರುತ್ತದೆ.ಸರ್ವೋಚ್ಚ ನ್ಯಾಯಾಲಯವು, ಪೂರ್ಣಾವಧಿ ನೋಟೀಸು ನೀಡುವ ನಿರಸನವು ಅಕ್ರಮವಾದುದಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.ಮುಂದುವರೆದು, ಸರ್ವೋಚ್ಚ ನ್ಯಾಯಾಲಯವು, ನೋಟೀಸನ್ನು ಜಾರಿಗೊಳಿಸುವ ವಿಧಾನ ಹಾಗೂ ಅವಧಿಯ ಆಜ್ಞಾಪಕವಾಗಿರುವಂಥ 27 (3) ನೇ ಪ್ರಕರಣದ ಉಪಬಂಧಗಳನ್ನು ನಿರ್ದೇಶನಾತ್ಮಕವಾಗಿ ಅರ್ಥೈಸಬೇಕೆಂದು ಹಾಗೂ 36 ನೇ ಪ್ರಕರಣದ ಹಿನ್ನಲೆಯಲ್ಲಿ ಆಜ್ಞಾಪಕವಾಗಿಯಲ್ಲವೆಂದೂ ಅಭಿಪ್ರಾಯಪಡುವಂತೆ ದಾರಿ ತೋರಿರುತ್ತದೆ ಹಾಗೂ ಮುಂದುವರೆದು ಅಕ್ರಮವು, ಕೆಲವು ಅಕ್ರಮಗಳನ್ನು ಅನುಸರಿಸಿ ನಡೆಸಿದ ಸಭೆಯಲ್ಲಿ ಹೊರಡಿಸಿದ ಠರಾವುಗಳನ್ನು ಅಸಿಂಧುಗೊಳಿಸುವುದಿಲ್ಲವೆಂದೂ ಅಭಿಪ್ರಾಯಪಟ್ಟಿರುತ್ತದೆ.

19. ಪ್ರಸ್ತುತ ರಿಟ್ ಅರ್ಜಿಗಳಲ್ಲೂ ಸಹ, ಆದ್ಯತೆ ನೀಡಿದಂಥ ಒಂದೇ ಆಧಾರವೆಂದರೆ, ಪ್ರಶ್ನಿತ ನೋಟೀಸ್ನಡಿಯಲ್ಲಿ ನಡೆಸಿದ ಸಭೆಯು, 3(2) ನೇ ನಿಯಮದಡಿಯಲ್ಲಿ ನಿರ್ದಿಷ್ಟಪಡಿಸಿದಂಥ ಪೂರ್ಣಾವಧಿಯ ನೋಟೀಸನ್ನು ನೀಡುವಲ್ಲಿ ನಿರಸನದ ಕಾರಣದ ಮೇಲೆ ನಿರರ್ಥಕವಾಗಿರುತ್ತದೆಂಬುದೇ ಆಗಿರುತ್ತದೆ.57 (2) ಪ್ರಕರಣದ ಉಪಬಂಧಗಳ ಹಿನ್ನಲೆಯಲ್ಲಿ, ಸದರಿ ಅಕ್ರಮವನ್ನು ಸಭಾ ನೋಟೀಸನ್ನು ಅನುಸರಿಸಿ ಹೊರಡಿಸಿದಂಥ ಸಭಾ ನೋಟೀಸು ಅಥವಾ ಠರಾವುಗಳು ನಿರರ್ಥಕವಾಗಿರುವಂಥ ಮುಖ್ಯ ಅಕ್ರಮವಾಗಿರುವಂತೆ ಅರ್ಥೈಸಲಾಗುವುದಿಲ್ಲ.ಅರ್ಜಿದಾರರ ಪರ ಮಾನ್ಯ ವಕೀಲರು ಉದಾಹರಿಸಿದ ತೀರ್ಪುಗಳು 57 (2) ನೇ ಪ್ರಕರಣದ ಉಪಬಂಧಗಳನ್ನು ಉಲ್ಲೇಖಿಸದೆ ನೀಡದವಾಗಿರುತ್ತದೆ.ಹಾಗಾಗಿ, ಅವು ಅರ್ಜಿದಾರರಿಗೆ ಅನ್ವಯವಾಗುವುದಿಲ್ಲ.

20. ಮೇಲಿನ ಚರ್ಚೆಯ ಹಿನ್ನಲೆಯಲ್ಲಿ ರಿಟ್ ಅರ್ಜಿಗಳನ್ನು ವಜಾಗೊಳಿಸಲಾಗಿರುತ್ತದೆ.ಪ್ರತ್ಯರ್ಜಿದಾರರು ಕೂಡಲೇ ಫಲಿತಾಂಶವನ್ನು ಘೋಷಿಸಲು ಸ್ವತಂತ್ರರಾಗಿರುತ್ತಾರೆ.

ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿರುವುದಿಲ್ಲ.